ನರಸಿಂಹ ಪೈ, ಕಾಸರಕೋಡ
ಹೆಣ್ಣಿಗೆ ಅಲಂಕಾರವೇ ಏಕೆ ಮುಖ್ಯ?



'ಒಡವೆ ಜೀವನ ಸಾಕ್ಷಾತ್ಕಾರ' ಎಂದು ತಲೆ ತುಂಬಿರುವುದರಿಂದ.

ಮಹಾವೀರ ಕಾಸರ, ಶಿವಮೊಗ್ಗ
ಗಾಂಧಿ ಟೋಪಿ, ನೆಹರೂ ಶರ್ಟ್ ಜೊತೆ ಯಾವ ಪ್ಯಾಂಟ್ ಧರಿಸಬೇಕು?
ನೆಹರೂದೇ ಆದೀತು. ಆದರೂ, ಅಷ್ಟು ಹಳೆಯ, ಮಾಸಿದ ಬಟ್ಟೆಯ ಮೇಲೇಕೆ ಆಸೆ ನಿಮಗೆ?

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ರಾಜ್ಯದಲ್ಲಿ ಗ್ಯಾರಂಟಿಗಳು ಇದ್ದರೂ ಕೂಲಿಗಾಗಿ ಪರರಾಜ್ಯಕ್ಕೆ ಗುಳೆ ಹೋಗುವುದು ಉಚಿತವೆ?
ದುಡಿಯಲು ಶಕ್ತಿಯುಳ್ಳ ಆತ್ಮಾಭಿಮಾನಿಗಳಿಗೆ ಗ್ಯಾರಂಟಿಯ ಅವಶ್ಯಕತೆಯಿಲ್ಲ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ಬೆವರ ಹನಿಗೂ, ಕಣ್ಣೀರ ಹನಿಗೂ ವ್ಯತ್ಯಾಸವೇನು?



ತಾಪಕ್ಕೊಂದು, ಸಂತಾಪಕ್ಕೊಂದು.

ಎಸ್ಸೆನ್ ಮಹಾಬಲರಾವ್, ಎನ್ನಾರ್‍ಪುರ
ಪೆದ್ದುಗೆ ಮುದ್ದು ಮಾಡಿದರೆ ಗೊತ್ತಾಗುವುದಿಲ್ಲ?
ಆಹಾ! ನಿಮ್ಮ ನಿಜ ಗುಣ ಪ್ರಜ್ವಲಿಸುತ್ತಿದೆ!

ದಿನೇಶ್, ಗುಡ್ಡದೂರು
ಉಚಿತ ಪಡಿತರ ಕೊಳ್ಳಲು ಇನ್ನೋವಾ ಕಾರಲ್ಲಿ ಬರುವ ಗ್ರಾಹಕರು ಬಡವರೋ, ಧನಿಕರೋ?
ಎಲ್ಲಿ ಕುಳಿತಿದ್ದ? ಡ್ರೈವಿಂಗ್ ಸೀಟಿನವನಾದರೆ ಆ ಕ್ಯಾಬಿನ ಬಡ ಚಾಲಕ.

ಎಂ.ಸಿ. ಧನ್ಯತಾ, ಬೆಂಗಳೂರು
ಅರಿಯುವುದಕ್ಕೂ, ಹರಿಯುವುದಕ್ಕೂ ಏನು ವ್ಯತ್ಯಾಸ?
'ಪದ ಅದೇ. ಮೇಷ್ಟ್ರ ಉಚ್ಚಾರದಲ್ಲಿ ಅರಿ, ಹನೌನ್ಸರ ಉಚ್ಚಾರದಲ್ಲಿ ಹರಿ' ಎಂದನಾ ಜ್ಞಾನಿ.

ಬಿ. ಚಂದ್ರೇಗೌಡ, ಬೆಂಗಳೂರು
ಹೆಣ್ಣನ್ನು 'ಚಂದ್ರಮುಖಿ' ಎಂದು ಕರೆಯುವುದೇಕೆ?
ಪ್ರಿಯನತ್ತ ತಿರುಗಿದರೆ ಬೆಳದಿಂಗಳು; ಅತ್ತ ತಿರುಗಿದರೆ ಅಮಾವಾಸ್ಯೆ ಆದ್ದರಿಂದ.

ಮಂಜುನಾಥ್ ಕೆ.ಪಿ. ಕೆ.ಟಿ.ಹಳ್ಳಿ
ಓಂ ಎಂದರೆ ಏನು ಗುರುವೆ?
ಅದು ಬೇಕರಿಯಲ್ಲಿ ದೊರೆಯುವ ಒಂದು ಬಿಸ್ಕತ್ತಿನ ಹೆಸರು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಗಂಡಾಂತರ: ಇದರ ನಿಜವಾದ ಅರ್ಥ?
ಒಬ್ಬನನ್ನು ಬಿಟ್ಟು ಇನ್ನೊಬ್ಬನನ್ನು ವರಿಸುವ ನಡುವಿನ ಸಮಯ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಶವಕ್ಕೆ ಹಾರ ಹಾಕಿ, ಪೂಜೆ ಮಾಡಿ, ನಮಸ್ಕರಿಸುತ್ತಾರಲ್ಲಾ, ಏಕೆ?
ಹಾರ, ಪೂಜೆ, ಗೌರವಗಳ ಆಸೆ ತೀರದೆ ದೆವ್ವ ಆಗಿಬಿಟ್ಟಾನೆಂಬ ಭಯ!

ಭಾನುಮತಿ ಭೋಜರಾಜ್, ಮಂಗಳೂರು
ಸೂರ್ಯ, ಚಂದ್ರ, ಗ್ರಹತಾರೆಗಳೆಲ್ಲಾ ನಮ್ಮ ದೇಶಕ್ಕೆ ಸೇರಿದ್ದೆಂದು ದೇಶದೇಶಗಳ ಮಧ್ಯೆ ಯುದ್ಧ ಆಗಬಹುದೆ?
ಖಂಡಿತ. ಅಂತಹ ಧೂಮಕೇತುಗಳು ಅಲ್ಲಲ್ಲಿರುವುದೇ ಬುವಿಯ ಗ್ರಹಚಾರ.

ಎಂ.ಜಿ. ಉಮಾ, ಬಳ್ಳಾರಿ
ಸ್ನೇಹಿತರು ಜೊತೆಗಿದ್ದರೆ ಹ್ಯಾಪಿ. ಇಲ್ಲದಿದ್ದರೆ?
ಅವನೊಬ್ಬ ಕಡುಪಾಪಿ!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ಒಂದೇ ಕುಟುಂಬದ ಅಣ್ಣತಮ್ಮಂದಿರು ಮೂರು ಬೇರೆಬೇರೆ ಪಕ್ಷಗಳಿಂದ ಸ್ಪರ್ಧಿಸುವ ಗುಟ್ಟೇನು?
'ಗೆದ್ದವರು ಇನ್ನಿಬ್ಬರೊಡನೆ ಹಂಚಿ ತಿನ್ನಬೇಕು' ಎಂಬ ಒಳ ಒಪ್ಪಂದವಂತೆ.

## ಬಹುಮಾನಿತ ಪ್ರಶ್ನೆ

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ
ಎಲ್ಲ ಸಂಶೋಧನೆಗಳನ್ನು ಮಾಡುವ ವಿಜ್ಞಾನಿಗಳು ನಾಯಿಬಾಲ ನೆಟ್ಟಗಾಗಿಸುವ ಯಂತ್ರ ಕಂಡುಹಿಡಿಯುವುದೆಂದು?
ಸದ್ಯಕ್ಕೆ ರಾಜಕಾರಣದ ನಾಯಿಗಳ ಬಾಲವನ್ನು ನೆಟ್ಟಗಾಗಿಸುವ 'ರೆಸಾರ್ಟ್' ಯಂತ್ರ ಜಾರಿಯಲ್ಲಿದೆ.

ಕಾವ್ಯಶ್ರೀ, ಶೋರಾಪುರ
ಸಕ್ರೆ ಹೆಚ್ಚು ತಿಂದ್ರೆ ಶುಗರ್; ಉಪ್ಪು ಹೆಚ್ಚು ತಿಂದ್ರೆ ಬಿಪಿ. ಲಂಚ ಹೆಚ್ಚು ತಿಂದ್ರೆ?
ವಿಐಪಿ!

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯ ಕೂಲಾಗಿರುವುದು ಯಾವಾಗ?
ಪ್ರತಿಕೂಲ ಇಲ್ಲದಿರುವಾಗ.

ಮಲ್ಲಿಕಾರ್ಜುನ, ಸುರಧೇನುಪುರ
ವೈದ್ಯೋ ನಾರಾಯಣೋ ಹರಿಃ ಎಂದರಿಯದ ವೈದ್ಯರಿಗೆ ಏನು ಹೇಳುವಿರಿ?



'ಸೆಕೆಂಡ್ ಒಪೀನಿಯನ್ ತೊಗೋತೀನಿ ಡಾಕ್ಟೆ' ಅಂತೀನಿ.

ಪಿ. ಶಂಕರಪ್ಪ, ಶಿವಮೊಗ್ಗ
ಇಲ್ಲೊಬ್ಬರು ತಮ್ಮ ಮನೆ ಮನಸ್ಸು ನಾರುತ್ತಿದ್ದರೂ ರಸ್ತೆ ಗುಡಿಸುತ್ತಾರಲ್ಲಾ?
ಮಾರ್ಗ ಶುಚಿಯಾದರೆ ಗಮ್ಯವೂ ಶುಚಿಯಾಗಬಹುದೆಂಬ ಸುಚಿಂತನೆ.

ಪಿ.ಜೆ. ರಾಘವೇಂದ್ರ, ಮೈಸೂರು
ಪ್ರಜಾಪ್ರಭುತ್ವದ ಮೂರು ಅಂಗಗಳೂ ವಂಶಪಾರಂಪರ್ಯತೆಗೆ ಬಲಿಯಾಗುತ್ತಿವೆಯಲ್ಲಾ?
ಮಂತ್ರಿಗಳು ರಾಜರಲ್ಲ ಎಂದು ನಮ್ಮ ಸಮಾಜ ಇನ್ನೂ ಅರಿತಿಲ್ಲದಿರುವುದೇ ಕಾರಣ.

■ ರಾಮ್